# ಪ್ರಕೃತಿಂ ಪರಮಾಂ ಅಭಯಾಂ ವರದಾಂ...

ಸ್ವಾಮಿ ಭಾಸ್ಕರಾನಂದ

**ಸು**ಮಾರು ಮೂವತ್ತು ವರ್ಷಗಳ ಹಿಂದೆ ನಡೆದ ಘಟನೆ. ಆಗ ನಾನು ಬೇಲೂರು ಮಠದಲ್ಲಿದ್ದೆ. ಒಂದು ದಿನ ಬೆಳಿಗ್ಗೆ ಸುಮಾರು ನಲವತ್ತು ವರ್ಷ ವಯಸ್ಸಿನ, ಸಭ್ಯ ಅಪರಿಚಿತ ರೊಬ್ಬರು ಬಂದರು. ಉಭಯ ಕುಶಲೋಪರಿ ನಡೆದ ಮೇಲೆ ಅವರು ಕೇಳಿದರು, "ಶ್ರೀಮಾತೆಯವರ ಶಿಷ್ಯ ಪಂಚಾನನ ಬ್ರಹ್ಮಚಾರಿ ಬಗ್ಗೆ ಕೇಳಿದ್ದೀರಾ? ಅವರು ಶಿಲ್ಲಾಂಗ್‌ನಲ್ಲಿದ್ದರು."

ಆಗ ನಾನು ಹೇಳಿದೆ, "ಹೌದು, ಒಬ್ಬ ಹಿರಿಯ ಸಾಧು ಗಳು ಹೇಳಿದ್ದು ಅಸ್ಪಷ್ಟವಾಗಿ ನೆನಪಿಗೆ ಬರುತ್ತಿದೆ. ಆ ಸಾಧುಗಳು ಹೇಳಿದ್ದರು, ಪಂಚಾನನ ಬ್ರಹ್ಮಚಾರಿಯ ಬಗ್ಗೆ ಒಂದು ಅದ್ಭುತ ಘಟನೆ ನಡೆದಿತ್ತು ಎಂದು. ಆದರೆ ಈಗ ನನಗೆ ಆ ಘಟನೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ." ನಾನು ಈ ಮಾತುಗಳನ್ನು ಆಡುವಾಗ, ಆ ಸಭ್ಯ ವ್ಯಕ್ತಿ ಕಣ್ಣೀರಿಡುತ್ತ ವಿನಯದಿಂದ ಹೇಳಿದರು, "ನಾನೇ ಆ ಭಕ್ತರೂ, ಸಜ್ಜನರೂ ಆದ ಪಂಚಾನನ ಬ್ರಹ್ಮಚಾರಿಯ ನತದೃಷ್ಟ ಮಗ."

"ಅವರ ಜೀವನದಲ್ಲಿ ನಡೆದ ಆ ಅದ್ಭುತ ಘಟನೆ ಯಾವುದೆಂದು ದಯಮಾಡಿ ಹೇಳಬಲ್ಲಿರಾ?" ಎಂದು ನಾನು ಅವರನ್ನು ಕೇಳಿದೆ. ಅವರು ಹೇಳಿದ ಘಟನೆಯನ್ನು ಅವರ ಮಾತುಗಳಲ್ಲಿಯೇ ನಾನಿಲ್ಲಿ ದಾಖಲಿಸಿದ್ದೇನೆ:

ಈ ಘಟನೆ ನಡೆದದ್ದು ೧೯೧೨ ರಲ್ಲಿ. ಶ್ರೀಮಾತೆಯವರು ಆಗ ಇನ್ನೂ ದೇಹಧಾರಿಯಾಗಿದ್ದರು. ನನ್ನ ತಂದೆ ಆಗ ಶಿಲ್ಲಾಂಗ್‌ನಲ್ಲಿ ಅಧ್ಯಾಪಕರಾಗಿದ್ದರು. ಆ ಸಮಯದಲ್ಲಿ ಬ್ರಿಟಿಷರು ಅಸ್ಸಾಮಿನ ರಾಜಧಾನಿಯನ್ನು ಢಾಕಾಕ್ಕೆ (ಬಾಂಗ್ಲಾದೇಶ) ವರ್ಗಾಯಿಸಿದ್ದರು. ಹೆಚ್ಚಿನ ಅಧಿಕಾರಿಗಳು ಸಂಸಾರ ಸಹಿತ ಢಾಕಾಕ್ಕೆ ಹೋಗಿದ್ದರಿಂದ ರಸ್ತೆಗಳೆಲ್ಲ ಜನಸಂಚಾರವಿಲ್ಲದೆ ಸ್ಮಶಾನಮೌನ ತಾಳಿದ್ದವು. ನನ್ನ ತಂದೆ ವಾಸಿಸುತ್ತಿದ್ದ ರಸ್ತೆಯ ಅಕ್ಕಪಕ್ಕ ಸುಮಾರು ಎಂಬತ್ತು ಮನೆಗಳಿದ್ದವು. ಅವುಗಳಲ್ಲಿ ಮೂರು ಮನೆಗಳನ್ನು ಬಿಟ್ಟರೆ ಉಳಿದೆಲ್ಲವೂ ನಿರ್ಜನವಾಗಿದ್ದವು. ಸ್ಥಳೀಯ ಆದಿವಾಸಿ ಪುಂಡ ಹುಡುಗರು ಈ ಮನೆಗಳನ್ನು ಲೂಟಿಮಾಡಲು ಪ್ರಾರಂಭಿಸಿದರು. ಕೆಲವು ಮನೆಗಳಿಗೆ ಕೊಳ್ಳಿ ಇಡಲೂ ಅವರು ಹೇಸಲಿಲ್ಲ.

> ಪೂಜ್ಯ ಸ್ವಾಮೀಜಿಯವರು ಅಮೆರಿಕದ ಪಶ್ಚಿಮ ವಾಷಿಂಗ್ಟನ್ ವೇದಾಂತ ಸೊಸೈಟಿಯ ಮುಖ್ಯಸ್ಥರು. 'ಗ್ಲೋಬಲ್ ವೇದಾಂತ' ಎಂಬ ಆಂಗ್ಲ ಮಾಸಪತ್ರಿಕೆಯನ್ನು ನಡೆಸುತ್ತಿರುವ ಇವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ಒಂದು ದಿನ ನನ್ನ ತಂದೆ ಮನೆಯಲ್ಲಿ ಕೆಲಸ ಮಾಡಲು ಮೂರು ಜನ ನೇಪಾಳಿ ಕೂಲಿಗಳನ್ನು ಕರೆಸಿದ್ದರು. ಕೆಲಸ ಎಷ್ಟಾಗಿದೆ ಎಂದು ನೋಡಲು ಗೇಟಿನ ಮುಂದೆ ಬಂದು ನಿಂತಾಗ ಅವರ ಮನೆಯಿಂದ ಕೆಳಗೆ ಮೂರನೇ ಮನೆ ಉರಿಯುತ್ತಿದೆ! ಆ ಮನೆಯು ಮಹಾರಾಣಿಯದಾಗಿತ್ತು. ಆಕೆಯ ರಾಜ್ಯವು ಆಗ ಬ್ರಿಟಿಷರ ಅಧೀನದಲ್ಲಿತ್ತು. ಆ ರಾಣಿ ಕೂಡ ಆಗ ಶಿಲ್ಲಾಂಗ್‌ನಲ್ಲಿರಲಿಲ್ಲ. ರಾಣಿಯ ನಿವಾಸಗಳಲ್ಲಿ ಒಂದು ದೊಡ್ಡದು, ಮತ್ತೊಂದು ಚಿಕ್ಕದು. ಹೀಗಿದ್ದ ಎರಡು ಮನೆಗಳಲ್ಲಿ, ಚಿಕ್ಕ ಮನೆ ಆಗಲೇ ಬೆಂಕಿಗೆ ಆಹುತಿ ಆಗಿತ್ತು. ಆಗಿನ ಕಾಲದಲ್ಲಿ ನಲ್ಲಿಗಳಲ್ಲಿ ನಿತ್ಯವೂ ನೀರಿನ ಸರಬರಾಜು ಇರುತ್ತಿರಲಿಲ್ಲ. ನಿಶ್ಚಿತ ದಿನಗಳಲ್ಲಿ ನಿಗದಿತ ಸಮಯದಲ್ಲಿ ಮಾತ್ರ ನೀರು ಬಿಡುತ್ತಿದ್ದರು. ಹೀಗಾಗಿ ಬೆಂಕಿ ಉರಿಯುತ್ತಿದ್ದಾಗ, ನಲ್ಲಿಗಳಲ್ಲಿ ನೀರಿರಲಿಲ್ಲ.

ನೇಪಾಳಿ ಕೆಲಸದವರಿಗೆ ನೀರು ತರಲು ಹೇಳಿ, ಕೈಗೆ ಸಿಕ್ಕಿದ ಬಕೆಟ್‌ನಲ್ಲಿ ನೀರು ತೆಗೆದುಕೊಂಡು, ನನ್ನ ತಂದೆ, ಬೆಂಕಿ ಉರಿಯುತ್ತಿದ್ದ ಜಾಗಕ್ಕೆ ಓಡಿದರು. ತಮ್ಮ ಕೈಯಲ್ಲಿದ್ದ ಬಕೆಟ್ ಅನ್ನು ನೇಪಾಳಿಗಳ ಕೈಯಲ್ಲಿ ಕೊಟ್ಟು, ದೊಡ್ಡ ಮನೆಯ ಹುಲ್ಲಿನ ಮಾಡಿನ ಮೇಲೆ ಹತ್ತಿದರು. ಕೆಳಗೆ ನಿಂತವನು ನೀರನ್ನು ಮೇಲಕ್ಕೆ ಕೊಡುವಾಗ ಅರ್ಧದಷ್ಟು ನೀರು ಕೆಳಗೆ ಬಿತ್ತು. ಅಷ್ಟರೊಳಗೆ ಬದಿಯಲ್ಲಿದ್ದ ಚಿಕ್ಕ ಮನೆಯ ಬೆಂಕಿ ನನ್ನ ತಂದೆ ಹತ್ತಿದ್ದ ದೊಡ್ಡ ಮನೆಗೂ ಆವರಿಸಿಕೊಂಡಿತ್ತು. ಬೆಂಕಿಯ ಜ್ವಾಲೆಗಳು ಇಪ್ಪತ್ತಡಿಗಿಂತಲೂ ಮೇಲೆ ಭಯಂಕರವಾಗಿ ಚಾಚಿಕೊಂಡಿದ್ದವು. ತನ್ನ ಸಾವು ಈಗ ನಿಶ್ಚಿತವೆಂದು ತಿಳಿದ ನನ್ನ ತಂದೆ ಬೇರೆ ಉಪಾಯಗಾಣದೆ ತಮ್ಮ ಗುರು ಶ್ರೀಮಾತೆ ಶಾರದಾದೇವಿಯವರನ್ನು ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಲು ಪ್ರಾರಂಭಿಸಿದರು.

ಆಗ ನನ್ನ ತಂದೆ ಅಪೂರ್ವವಾದ ದೃಶ್ಯವೊಂದನ್ನು ನೋಡಿದರು: ಶ್ರೀಮಾತೆಯವರು ತಮ್ಮ ಅಲೌಕಿಕ ಪ್ರಭೆಯಿಂದ ಕಣ್ಣುಗಳಲ್ಲಿ ದಯಾಭಾವವನ್ನು ಪ್ರಕಾಶಿಸುತ್ತ, ಅವರೆದುರಿಗೆ ಆಕಾಶದಿಂದ ಬಂದು ಪ್ರತ್ಯಕ್ಷರಾದರು; ಅಭಯದಾತೆಯಾಗಿ "ಹೆದರಬೇಡ ಮಗೂ, ನಾನಿದ್ದೇನೆ" ಎಂದು ಹೇಳಿ ತಮ್ಮ ಕೈಗಳನ್ನು ಚಾಚಿ, ಉರಿಯುವ ಬೆಂಕಿಯ ಕೆನ್ನಾಲಿಗೆಗಳನ್ನು ಶಾಂತಗೊಳಿಸಿದರು. ನನ್ನ ತಂದೆಗೆ ಬೆಂಕಿಯ ಬಿಸಿಯೇ ಗೊತ್ತಾಗಲಿಲ್ಲ.

ಅನಂತರ ಸುಮಾರು ಮೂರು ಗಂಟೆಗಳಷ್ಟು ಕಾಲ ನನ್ನ

ತಂದೆಗೆ ಪ್ರಜ್ಞೆ ಇರಲಿಲ್ಲ. ಪ್ರಜ್ಞೆ ಮರಳಿದ ಮೇಲೆ ನೋಡುತ್ತಾರೆ – ಚಿಕ್ಕ ಮನೆಯು ಆಗಲೇ ಬೆಂಕಿಗೆ ಸಂಪೂರ್ಣವಾಗಿ ಆಹುತಿಯಾಗಿತ್ತು. ದೊಡ್ಡ ಮನೆ ಬೆಂಕಿಯ ಸ್ಪರ್ಶವೇ ಆಗಿಲ್ಲ ಎನ್ನುವ ಹಾಗೆ ಇತ್ತು. ಅದರ ಒಂದೇ ಒಂದು ಹುಲ್ಲೆಸಳಿಗೂ ಬೆಂಕಿ ತಾಗಿರಲಿಲ್ಲ. ನನ್ನ ತಂದೆ ಯಾವಾಗ ಎದ್ದು ಕುಳಿತರೋ, ನೇಪಾಳಿ ಕೆಲಸದವರು ಆಶ್ಚರ್ಯದಿಂದ "ನೀವು ಇನ್ನೂ ಜೀವಂತವಾಗಿದ್ದೀರಾ? ನಾವು ನೋಡುತ್ತಿದ್ದ ಹಾಗೆ ನಿಮ್ಮ ಸುತ್ತಲೂ ಬೆಂಕಿ ಆವರಿಸಿಕೊಂಡಿತು. ನಿಮ್ಮ ಬಾಯಿಯಿಂದ 'ಅಮ್ಮಾ ಅಮ್ಮಾ' ಎಂಬ ಕೂಗು ಮಾತ್ರ ಸ್ವಲ್ಪ ಹೊತ್ತು ಕೇಳಿಸಿತು. ಅನಂತರ ನಿಮ್ಮ ಸುಳಿವೇ ಇರಲಿಲ್ಲ. ನಾವು ಯೋಚಿಸಿದೆವು, ನೀವು ಭಸ್ಮವಾಗಿ ಹೋಗಿರಬಹುದೆಂದು" ಎಂದು ಹೇಳಿದರು. ಅನಂತರ ನನ್ನ ತಂದೆ ಮಾಡಿನಿಂದ ಕೆಳಗಿಳಿಯಲು ಆ ಕೂಲಿಯಾಳುಗಳು ಸಹಕರಿಸಿದರು. ನನ್ನ ತಂದೆಯ ಮುಖದಲ್ಲಿ ಕೆಲವು ಸುಟ್ಟ ಗಾಯಗಳಿದ್ದವು ಮತ್ತು ಬೊಬ್ಬೆಗಳಿದ್ದವು. ಆಶ್ಚರ್ಯಕರ ವಿಷಯವೆಂದರೆ ದೇಹದ ಇತರ ಭಾಗಗಳಿಗೆ ಏನೂ ಆಗಿರಲಿಲ್ಲ. ಆದರೆ ಮುಖದ ಮೇಲಿನ ಚರ್ಮ ಕೆಂಪಾಗುತ್ತ ಹೋಗಿ. ಅನಂತರ ಕಪ್ಪಾಗತೊಡಗಿತು. ಎಷ್ಟು ಕಪ್ಪಾಯಿತೆಂದರೆ ಕೆಲವು ದಿನಗಳ ನಂತರ ತೀರ ಪರಿಚಿತರು ಕೂಡ ನನ್ನ ತಂದೆಯ ಗುರುತು ಹಿಡಿಯದಾದರು.

ನನ್ನ ತಂದೆಯ ವೈದ್ಯ ಸ್ನೇಹಿತರೊಬ್ಬರು ಚರ್ಮದ ಮೇಲ್ಪದರ ಸುಟ್ಟು ಹೋಗಿರುವುದರಿಂದ ಮುಖವು ಸುಲಿದ ಹಾಗೆ ಆಗುವುದು ಮತ್ತು ಕೆಳಪದರವು ಬಿಳಿಚಿಕೊಂಡ ಹಾಗೆ ಆಗುವುದು; ಮುಂದೆ ಬಿಳಿ ತೊನ್ನು ಆದವರ ಹಾಗೆ ಕಾಣಬಹುದು ಎಂದು ಹೇಳಿದರು.

ವೈದ್ಯರು ಹೇಳಿದ ವಿಚಾರ ಕೇಳಿ ನನ್ನ ತಂದೆ ಚಿಂತೆಗೊಳಗಾದರು. ಒಂದು ದಿನ ಪ್ರಾತಃಕಾಲ ಮೂರು ಗಂಟೆಗೆ ಅವರಿಗೆ ಒಂದು ದರ್ಶನ (ಸ್ವಪ್ನ) ವಾಯಿತು. ಶ್ರೀಮಾತೆಯವರು ಬಂದು ಹೇಳಿದರು – "ಮಗೂ, ನಿನ್ನ ಮುಖದ ಸುಟ್ಟ ಗಾಯಗಳಿಂದ ನಿನಗೆ ತುಂಬ ಚಿಂತೆಯಾಗಿದೆಯಲ್ಲವೇ? ನೀನು ಒಂದು ಸಲ ನನಗೆ ಗುಣ ಮಾಡೆಂದು ಕೇಳಿಕೊಂಡರೆ ಸಾಕು, ನಾನು ನಿನ್ನ ಮುಖವನ್ನು ಮೊದಲಿನ ಹಾಗೆ ಮಾಡಿಬಿಡುತ್ತೇನೆ." ನನ್ನ ತಂದೆ ಇದಕ್ಕೆ "ಇದನ್ನು ಸರಿಮಾಡೆಂದು ನಾನು ಕೇಳಲಾರೆ, ಈ ಬಾಹ್ಯ ಸೌಂದರ್ಯದಿಂದ ನಾನೇನು ತಾನೇ ಮಾಡಲಿ? ನಾನು ನಿನ್ನನ್ನು ಕೇಳಲೇಬೇಕಾದಲ್ಲಿ ಇದಕ್ಕಿಂತ ಉತ್ತಮವಾದ ವರವನ್ನು ಕೇಳಬೇಕು" ಎಂದರು. ಈ ಮಾತನ್ನು ಕೇಳಿ, ಕರುಣಾಮಯಿ ಶ್ರೀಮಾತೆ ತಮ್ಮ ಅಲೌಕಿಕ ಸ್ನಿಗ್ಧ ಮುಗುಳ್ನಗೆಯನ್ನು ಬೀರುತ್ತ, ನನ್ನ ತಂದೆಗೆ ಹೀಗೆ ಹೇಳಿದರು: "ಮಗೂ, ನೀನು ನನ್ನನ್ನು ಕೇಳದಿದ್ದರೂ ನಾನೇ ನಿನಗೆ ದಾರಿ ತೋರಿಸುತ್ತೇನೆ. ಬಂಗಾಳಿ ವರ್ಷದ ಕೊನೆಯ ದಿನ, ಹತ್ತಿರದಲ್ಲಿರುವ ಪರ್ವತದ ತಪ್ಪಲಿನಲ್ಲಿರುವ ಝರಿಯಲ್ಲಿ ಸ್ನಾನ ಮಾಡಿ ಬಂದರೆ, ನೀನು ಸಂಪೂರ್ಣ ಮೊದಲಿನ ಹಾಗೆ ಆಗುತ್ತೀಯೆ." ಇಷ್ಟು ಹೇಳಿ ಶ್ರೀಮಾತೆಯವರು ಅದೃಶ್ಯರಾದರು.

ನನ್ನ ತಂದೆಯ ಜೊತೆ ಸದ್ಗೃಹಸ್ಥರೊಬ್ಬರು ಒಂದು ಕೊಠಡಿಯಲ್ಲಿ ಇರುತ್ತಿದ್ದರು. ಒಂದು ಸಲ ಅವರು ಹೇಳಿದರು, "ನಿಮ್ಮ ಮುಖದಲ್ಲಿ ದಿನದಿಂದ ದಿನಕ್ಕೆ ಭಯಂಕರ ಬದಲಾವಣೆಗಳು ಆಗುತ್ತಿವೆ. ಅದಕ್ಕೊಂದು ಪರಿಹಾರವಿಲ್ಲವೆ?" ಅದಕ್ಕೆ ನಮ್ಮ ತಂದೆ ಶ್ರೀಮಾತೆಯವರು ಕೊಟ್ಟ ಅಭಯವಚನವನ್ನು ತಿಳಿಸಿದರು. ಈ ಮಾತನ್ನು ಆತ ಎಲ್ಲರಿಗೆ ತಿಳಿಸಿ, ಅದು ಸುತ್ತಮುತ್ತಲೂ ಹರಡಿಬಿಟ್ಟಿತು. ಈ ಸುದ್ದಿ ಹರಡುವುದರಲ್ಲಿ ಒಬ್ಬ ಬ್ರಾಹ್ಮಸಮಾಜದ ವ್ಯಕ್ತಿಯ ಪಾತ್ರ ಹೆಚ್ಚಿನದಿತ್ತು. ಇವರೆಲ್ಲ ಸೇರಿ ನಮ್ಮ ತಂದೆಯ ಕಿವಿಗೆ ಬೀಳುವ ಹಾಗೆಯೇ ಅವರ ಬಗ್ಗೆ ಅಪನಂಬಿಕೆಯನ್ನು ವ್ಯಕ್ತಪಡಿಸಿದರು.

ಬಂಗಾಳಿ ವರ್ಷ ಮುಕ್ತಾಯಕ್ಕೆ ಬರುತ್ತಿದ್ದ ಹಾಗೆ ನನ್ನ ತಂದೆಯವರ ಮನಸ್ಸು ಚಂಚಲವಾಗತೊಡಗಿತು. "ಒಂದು ವೇಳೆ ಶ್ರೀಮಾತೆಯವರು ಹೇಳಿದ ಹಾಗೆ ನಡೆಯದೆ ಹೋದರೆ ಸಾರ್ವಜನಿಕರು ತಮಾಷೆ ಮಾಡುತ್ತಾರೆ. ನನ್ನನ್ನು ತಮಾಷೆ ಮಾಡಿದರೂ ಪರವಾಗಿಲ್ಲ. ಆದರೆ ಶ್ರೀಮಾತೆಯವರನ್ನು ಜನರು ಗೇಲಿ ಮಾಡುತ್ತಾರೆ" – ಈ ಚಿಂತೆಯಿಂದ ತಂದೆಯವರ ಮನಸ್ಸು ಕುಂದಿತು. ಆ ದಿವಸ ಸ್ನಾನಕ್ಕೆ ಹೋಗಲೇ ಬಾರದೆಂದು ಅವರು ಸಂಕಲ್ಪಿಸಿಕೊಂಡರು.

ಆ ದಿನ ಬಂದೇ ಬಂತು! ಸ್ನಾನಕ್ಕೆ ಹೋಗಬಾರದೆಂದು ಯೋಚಿಸಿಕೊಂಡಿದ್ದರೂ ಕೂಡ ಅವರ ಅರಿವಿಗೆ ಬಾರದೆ, ಒಂದು ಅಲೌಕಿಕ ಶಕ್ತಿಯು ಅವರನ್ನು ಝರಿಯ ಹತ್ತಿರ ಕರೆದುಕೊಂಡು ಹೋಯಿತು.

ಝರಿಯಲ್ಲಿ ಸ್ನಾನಮಾಡಿ, ಅವರು ಬೇಗ ಬೇಗನೆ ಮನೆ ಸೇರಿದರು. ಅಷ್ಟರಲ್ಲಿ ಇಬ್ಬರು ಪರಿಚಯಸ್ಥರು ಆಗಲೇ ಬಂದು ಅವರ ಮನೆಯಲ್ಲಿ ಕಾತುರದಿಂದ ಕಾಯುತ್ತಿದ್ದರು. ಅವರು ಆಶ್ಚರ್ಯದಿಂದ ನೋಡುತ್ತಲೇ ಇದ್ದರು. ಏಕೆಂದರೆ ನನ್ನ ತಂದೆಯ ಮುಖದ ಮೇಲೆ ಸುಟ್ಟಗಾಯದ ಕಲೆಗಳೇ ಇರಲಿಲ್ಲ. ಅವರ ಮುಖ ಮೊದಲಿನಂತೆ ಸರಿಹೋಗಿತ್ತು!

ಪಂಚಾನನ ಬ್ರಹ್ಮಚಾರಿಯವರ ಮಗ ಕಣ್ಣೀರಿಡುತ್ತ ಹೇಳಿದರು: "ನಮ್ಮ ತಂದೆಯವರ ಜೀವನದಲ್ಲಿ ನಡೆದ ಅದ್ಭುತವೆಂದರೆ ಇದೇ. ಶಿಲ್ಲಾಂಗಿನಲ್ಲಿ ನಡೆದ ಈ ಘಟನೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಿದ ನಂತರ ರಾಮಕೃಷ್ಣ ಮಠದ ಸಾಧುಗಳು ಕೂಡ ಇದನ್ನು ಒಪ್ಪಿಕೊಂಡರು. ಅನಂತರ ನಮ್ಮ ತಂದೆ ಈ ಘಟನೆಯನ್ನು ಅವರ ಮಿತ್ರ ಜಗದೀಶ್ ಚಂದ್ರ ಮುಖ್ಯೋಪಾಧ್ಯಾಯರಿಗೆ ಹೇಳಿದರು. ಅವರು ಈ ಘಟನೆಯನ್ನು ಬರೆದು ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ'ಕ್ಕೆ ಕೊಟ್ಟರು. ಅದು ೧೯೩೯ರಲ್ಲಿ ಪ್ರಕಟವಾಯಿತು."